ಅಪ್ಪಿಕೊಂಡ. ಕೇತಕಿಯ ತೇವದ ಸುಳಿಯಲ್ಲಿ ಲೀನವಾಗುತ್ತಾ, ಹಗುರವಾಗುತ್ತಾ ಐಕ್ಯವಾದ ಸಂದೀಪ.

ಮರುದಿನದಿಂದ ಶಾಲೆ ಬಿಟ್ಟೊಡನೆ ಬೇಗ ಬಂದು ತೋಟದ ಮರದ ಮನೆಗೆ ಹೋಗಿ ಒಂದಷ್ಟು ಹೊತ್ತು ಕಾಲು ಚಾಚಿ ಮಲಗಿ ಸಿಕ್ಕಿದ್ದನ್ನು ಓದಿಕೊಂಡು ಬರುವುದು ಕೇತಕಿಗೆ ಅಭ್ಯಾಸವಾಯಿತು.

ರಾತ್ರಿ ಬಂದು ಮಲಗಿದ್ದವನ ಎದೆಗೆ ಒಮ್ಮೆಲೇ ಒರಗಿದಳು. ಸಂದೀಪ, 'ಮೆಲ್ಲಗೆ ಮಾರಾಯ್ತಿ, ಮೊದಲೆ ವೀಕು ಈ ಎದೆ. ನೀನು ಹೀಗೆ ಮೇಲೆ ಬಿದ್ರೆ ಸತ್ತೇ ಹೋದೇನು' ಎಂದ. ಥಟ್ಟೆಂದು ಎದ್ದು ಕೂತಳು. 'ಎಲ್ಲ ತಮಾಷೆ ಸರಿ, ಒಪ್ಕೊತೀನಿ. ಆದ್ರೆ ಈ ಮಾತು ಮಾತಿಗೆ ಸಾಯೋ ಮಾತು ಬೇಕಾ' ಎಂದವಳಿಗೆ, 'ಸಾಯೋವಷ್ಟು ಸುಖ ಬೇರೊಂದಿಲ್ಲ ಅಂತ ಒಮ್ಮೊಮ್ಮೆ ಅನ್ಸುತ್ತೆ. ಹಾಗೇ ಹಗುರ ಹಗುರವಾಗುತ್ತಾ ಗೊತ್ತೇ ಆಗಬಾರ್ದು. ಹಾಗೆ ಈ ಬದುಕು ಬೇಗ ಮುಗ್ದು ಬಿಡ್ಬೇಕು. ಇಲ್ಲಿ ಇದ್ದಷ್ಟೂ ಹೊತ್ತು ಹೊರೆ ಹೊರಬೇಕು ನೋಡು. ಬೇಗ ಖಾಲಿಯಾಗಬೇಕು' ಎನ್ನುತ್ತಾ ಚುಂಬಿಸಿದ. 'ಕೆಟ್ಟ ಹುಡುಗಿ ನೀನು. ನಿನ್ನನ್ನು ಸೇರೋವಾಗ್ಲೂ ಸಾಯ್ತಿನಿ ನಾನು, ಎಲ್ಲಿಗೆ ಬಂದು ಮುಟ್ಟಿದೆ ಎಂದು. ಇದೆಲ್ಲ ಬೇಡವೆಂದವನಿಗೆ ಇದನ್ನೂ ಅಭ್ಯಾಸ ಮಾಡಿಸಿದೆ. ಈಗ ನಿದ್ದೆ ಬರಬೇಕು ಎಂದರೆ ಕೇತಕಿನೂ ಹತ್ತಿರ ಇರಬೇಕು ಅನ್ಸುತ್ತೆ. ಇದೇ ಈ ಕಂಡೀಶನ್ಡ್ ಬದುಕೇ ನಂಗೆ ಬೇಡವಾಗಿದ್ದು, ಆದರೀಗ ಸಿಕ್ಕಿ ಬಿದ್ದೆ' ಎಂದಾಗ ಕೇತಕಿಯ ಮುಖ ಕೆಂಪಾಯಿತು. ಅವನ ಸ್ಪರ್ಶಕ್ಕೆ ಕರಗುತ್ತಾ ಹೋದಂತೆ, ನೂರು ನೂರು ಬೆಳಗಾದಂತೆ ಮತ್ತೊಂದು ಬೆಳಗೂ ಆಗಿ ಹೋಯಿತು.

★★★

ತೋಟದ ಮೂಲೆಯಲ್ಲಿದ್ದ ದೇವಕಣಗಿಲೆಯ ಒಂದಷ್ಟು ಹೂವನ್ನು ತಂದು ಕೈಗಿಟ್ಟ. 'ಒಂದು ವರ್ಷ ನನ್ನ ನೀನು, ಅಷ್ಟೇ ಕಷ್ಟದಲ್ಲಿ ನಿನ್ನನ್ನು ನಾನು ಸಹಿಸಿದ್ದಕ್ಕೆ ಈ ಹೂಗಳು. ಆನಿವರ್ಸರಿ ಮಣ್ಣು ಮಸಿ ಇವ್ಯಾವುದೂ ಬೇಡ ಕೇತಕಿ. ಆ ಲೆಕ್ಕದಲ್ಲಿ ಜೋರಾಗಿ ಬೇಕಾದ್ರೆ ಎದೆಗೆ ಬಂದು ಬೀಳು' ಎಂದಾಗಲೇ ಕೇತಕಿಗೂ ಮದುವೆ ಆಗಿ ಒಂದು ವರ್ಷವಾಯ್ತು ಅನ್ನೋದು ನೆನಪಾಗಿದ್ದು. ತಬ್ಬಿಕೊಂಡು, 'ಸಂಜೆ ಬೇಗ ಬರ್ತಿನಿ, ನೀವು ಪಿಕ್ ಮಾಡಲು ಬಂದ್ರೆ ಬೇಗ ಬರಬಹುದು. ಬಂದಂಗೇ ರಾಕ್ಷಸಿಯ ಹಾಗೆ ಎದೆಗೆ ಬೀಳ್ತಿನಿ' ಎಂದಳು.

